ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರ ಕಛೇರಿ
ರಸ್ತೆ ಮೂಲಭೂತ ಸೌಕರ್ಯ
ಎನ್.ಆರ್.ಚೌಕ, ಬೆಂಗಳೂರು–02
ದಿನಾಂಕ:12.10.2020.

ತಾಂತ್ರಿಕ ಮಂಜೂರಾತಿ

ವಿಷಯ:–**"Widening and Comprehensive Development of Singapura Garden Road from Abbigere Road (Precision Components Factory) to Shrinikethan Layout(BDA Layout)"** ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:–1.ಮಾನ್ಯ ಕಂದಾಯ ಸಚಿವರ ಪತ್ರ ಸಂಖ್ಯೆ:ಕಂ.ಇ.ಸ./ಪ.ಗೃ/193/2020–21. ದಿ:01.08.2020.
2.ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ:ಬಿ12(1)/ಪಿಆರ್/394/2018–19. ದಿನಾಂಕ:25.09.2019.

****

ಪ್ರಸ್ತಾವನೆ:–

ಉಲ್ಲೇಖ(1)ರ ಮಾನ್ಯ ಕಂದಾಯ ಸಚಿವರ ಟಿಪ್ಪಣಿ ಪತ್ರದಲ್ಲಿ 2020–21ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–3075(**Special Development Works in Bangalore (Bangalore city incharge Minister Discretionary Grants)** ಅಡಿಯಲ್ಲಿ ಅನುಮೋದನೆ ಕೋರಿದ್ದ ಕಾಮಗಾರಿಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಅನುದಾನ ಬಿಡುಗಡೆ ಮಾಡಿ ಜಾಬ್‌ಸಂಖ್ಯೆ ನೀಡಲು ಆದೇಶಿಸಿರುವಂತೆ ಮೇಲ್ಕಂಡ ರಸ್ತೆ ಅಗಲೀಕರಣ/ಅಭಿವೃದ್ಧಿ ಕಾಮಗಾರಿಗೆ **ರೂ.550.00 ಲಕ್ಷಗಳ(ರೂಪಾಯಿ ಐದು ಕೋಟಿ ಐವತ್ತು ಲಕ್ಷಗಳು ಮಾತ್ರ)** ಮೊತ್ತಕ್ಕೆ ಜಾಬ್ ಸಂಖ್ಯೆ:012–21–000004 ರಂತೆ ನೀಡಲಾಗಿರುವಂತೆ, ಕಾರ್ಯಪಾಲಕ ಅಭಿಯಂತರರು (ರಮೂಸೌ–ದಾಸರಹಳ್ಳಿ ವಿಭಾಗ) ರವರು ರಸ್ತೆ ಅಗಲೀಕರಣ/ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ವಿಸ್ತೃತಾ ಯೋಜನಾ ವರದಿ ತಯಾರಿಸಿ ಅಂದಾಜು ಮೊತ್ತಕ್ಕೆ ಸಕ್ಷಮ ಪ್ರಾಧಿಕಾರವಾದ ಮಾನ್ಯ ಆಡಳಿತಗಾರರಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ತಾಂತ್ರಿಕ ಮಂಜೂರಾತಿ ಅನುಮೋದನೆ ಕೋರಿರುವಂತೆ ಉಲ್ಲೇಖ(2)ರ ಅಧಿಕಾರ ಪ್ರತ್ಯಾಯೋಜನೆ ಆದೇಶದನ್ವಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಆದೇಶ ನೀಡಬೇಕಾಗಿರುತ್ತದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ರಸ್ತೆ ಅಗಲೀಕರಣ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಯಾದ **"Widening and Comprehensive Development of Singapura Garden Road from Abbigere Road (Precision Components Factory) to Shrinikethan Layout(BDA Layout)"** ಗೆ 2020–21ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–3075(**Special Development Works in Bangalore(Bangalore city incharge Minister Discretionary Grants)** ಅಡಿಯಲ್ಲಿ **ರೂ.550.00 ಲಕ್ಷಗಳ (ರೂಪಾಯಿ ಐದು ಕೋಟಿ ಐವತ್ತು ಲಕ್ಷಗಳು ಮಾತ್ರ)** ಮೊತ್ತಕ್ಕೆ ಜಾಬ್‌ಸಂಖ್ಯೆ ನೀಡಲಾಗಿರುವಂತೆ ವಿಸ್ತೃತಾ ಯೋಜನಾ ವರದಿ ಮತ್ತು ಅಂದಾಜುಪಟ್ಟಿ ತಯಾರಿಸಿ ಸಲ್ಲಿಸಿದ್ದು, ಉಲ್ಲೇಖ(2)ರ ಅಧಿಕಾರ

Scanned with CamScanner

ಪ್ರತ್ಯಾಯೋಜನೆಯಂತೆ ಮಾನ್ಯ ಆಡಳಿತಗಾರರಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಂದಾಜು ಪಟ್ಟಿಗೆ ಕೆಳಕಂಡ ತಾಂತ್ರಿಕ ನಿಬಂಧನೆಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿ ಆದೇಶ ನೀಡಲಾಗಿದೆ.

ಈ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರವರ ದಾಖಲುಪಟ್ಟಿ ಸಂಖ್ಯೆ:CE(RI)/TS /31/2020-21. ದಿನಾಂಕ:12.10.2020ರಲ್ಲಿ ದಾಖಲಿಸಲಾಗಿದೆ.

ತಾಂತ್ರಿಕ ನಿಬಂಧನೆಗಳು :

1. ಅಂದಾಜು ಪಟ್ಟಿಯಲ್ಲಿ ಮೀಸಲಿರಿಸಿರುವ ಇಡಿಗಂಟು(Lumpsum) ರೂಪದಲ್ಲಿ ಒದಗಿಸಲಾದ ಮೊತ್ತಗಳಿಗೆ ವಿವರವಾದ ಉಪ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
2. ಅಂದಾಜು ಪಟ್ಟಿಯಲ್ಲಿ ದರಪಟ್ಟಿಯಲ್ಲಿ ಇಲ್ಲದೇ ಇರುವ ಅಥವಾ ಮಂಜೂರಾದ ದರಗಳಿಲ್ಲದೇ ಇರುವ ಅಂಶಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರವೇ ಅನುಷ್ಠಾನಗೊಳಿಸಲು ಕ್ರಮವಹಿಸುವುದು.
3. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.
4. ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ ರಸ್ತೆ ಇತಿಹಾಸ(Road History) ವಹಿಯಲ್ಲಿ ದಾಖಲಿಸತಕ್ಕದ್ದು.
5. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
6. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
7. ಕಾಮಗಾರಿಗೆ ಅವಶ್ಯವಿರುವ Structural Design and Drawings ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಕಾಮಗಾರಿಯಲ್ಲಿ ಬಿಡುಗಡೆಗೊಳ್ಳುವ ಉಪಯುಕ್ತ ಸಾಮಗ್ರಿಗಳನ್ನು ಎಂಎಎಸ್ ಲೆಕ್ಕಕ್ಕೆ ಪಡೆದು ದಾಖಲೆ ನಿರ್ವಹಿಸತಕ್ಕದ್ದು.
9. ಬೆಂಗಳೂರು ಜಲ ಮಂಡಳಿಯು ಕೊಳವೆ ಅಳವಡಿಸಲು ಕತ್ತರಿಸಿರುವ ರಸ್ತೆಭಾಗಗಳ ಪುನಃಶ್ಚೇತನವನ್ನು ಈ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿದ್ದಲ್ಲಿ, ಸದರಿ ಪುನಃಶ್ಚೇತನ ಅಂಶವನ್ನು ಮತ್ಯಾವುದೇ ಕಾಮಗಾರಿ/ ಅಂದಾಜು ಪಟ್ಟಿಯಲ್ಲಿ ಮತ್ತು ಬೆಂಗಳೂರು ಜಲಮಂಡಳಿಯು ಪಾಲಿಕೆಗೆ ಪಾವತಿಸಿರುವ ರೂ.34.00 ಕೋಟಿಗಳ ಠೇವಣಿ ಆಧಾರದ ಕಾಮಗಾರಿಗಳಲ್ಲಿಯೂ ಒಳಗೊಂಡಿಲ್ಲದಿರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು ಮತ್ತೊಮ್ಮೆ ದೃಢೀಕರಿಸಿಕೊಂಡ ನಂತರವೇ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು.
10. ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ರಸ್ತೆ/ಸ್ಥಳ, ಅಂಶ ಮತ್ತು ಪರಿಮಾಣಗಳು ಮತ್ಯಾವುದೇ ಕಾಮಗಾರಿ/ ಅಂದಾಜು ಪಟ್ಟಿಯಲ್ಲಿ ಒಳಗೊಂಡಿಲ್ಲದಿರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು ಮತ್ತೊಮ್ಮೆ ದೃಢೀಕರಿಸಿಕೊಂಡ ನಂತರವೇ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು.

ಮುಖ್ಯ ಅಭಿಯಂತರರು (ರಮೂಸೌ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
12/10/2020

ಪ್ರತಿಯನ್ನು:-

1. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗೆ ತರಲು ತಾಂತ್ರಿಕ ಸಹಾಯಕರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಅಧೀಕ್ಷಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ಕಾ.ಪಾ.ಅ(ರಮೂಸೌ–ದಾಸರಹಳ್ಳಿ ವಿಭಾಗ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಕಡತಕ್ಕೆ.

Scanned with CamScanner